# ಉತ್ತಮ ಆಡಳಿತದ ಸಾಧನವಾಗಿ ನಾಗರಿಕ ಸಮಾಜ

ಶಿವಣ್ಣ
ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಿತ್ರದುರ್ಗ.

DOI: https://doi.org/10.5281/zenodo.18849782

## ABSTRACT:

ಉತ್ತಮ ಆಡಳಿತದ ಸಾಧನವಾಗಿ ನಾಗರಿಕ ಸಮಾಜ ಎನ್ನುವ ಈ ಲೇಖನವು ಆಡಳಿತ ಉತ್ತಮವಾಗಿರಬೇಕಾದರೆ ಹೇಗೆ ನಾಗರಿಕ ಸಮಾಜವು ಪಾತ್ರವಹಿಸುತ್ತದೆ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಮಾನವನಲ್ಲಿರುವ ಸಹಜವಾದಂತಹ ಸಾಂಘಿಕವಾದ ಸ್ವಭಾವದಿಂದ ಸಮಾಜ ರಚನೆಯಾಗುತ್ತದೆ. ಸಮಾಜದಲ್ಲಿರುವ ಜನರ ವರ್ತನೆಗಳನ್ನು ನಿಯಂತ್ರಿಸಲು ಕಂಡುಕೊಂಡ ಅಥವಾ ಸ್ಥಾಪಿಸಿಕೊಂಡ ಸಂಸ್ಥೆಯೇ ರಾಜ್ಯ. (ಇದಕ್ಕೆ ಸಂಬಂಧಿಸಿದಂತೆ ಹಲವಾರು ಸಿದ್ಧಾಂತಗಳಿರುವುದು ನಮಗೆ ತಿಳಿದೇ ಇದೆ) ಈ ರಾಜ್ಯ ಒಂದು ಕಾಲ್ಪನಿಕ ಸಂಸ್ಥೆಯಾಗಿದ್ದು, ಇದರ ಉದ್ದೇಶಗಳನ್ನು ಈಡೇರಿಸಲು ಸರ್ಕಾರ ಎನ್ನುವ ಮೂರ್ತರೂಪದ ಸಂಸ್ಥೆ ರಚನೆಯಾಗಿದೆ. (ಲಾಕ್‌ರವರ ಸಾಮಾಜಿಕ ಒಪ್ಪಂದ ಸಿದ್ಧಾಂತದಲ್ಲಿ ಕಾಣಬಹುದು) ಈ ಸರ್ಕಾರ ರಾಜ್ಯದ ಉದ್ದೇಶಗಳನ್ನು ಈಡೇರಿಸಲು ಕ್ರಿಯಾಶೀಲವಾಗುವುದನ್ನು ಅಥವಾ ಕಾರ್ಯೋನ್ಮುಖವಾಗುವುದನ್ನು ಆಳ್ವಿಕೆ ಎನ್ನಲಾಗುತ್ತದೆ. ಇದರ ಕಾರ್ಯ ಸ್ವರೂಪದ ಆಧಾರದ ಮೇಲೆ ಉತ್ತಮ ಮತ್ತು ಉತ್ತಮವಲ್ಲದ ಆಳ್ವಿಕೆ ಎಂದು ಗುರುತಿಸಲಾಗಿದ್ದು, ಉತ್ತಮವಾಗಿಲ್ಲದ ಆಳ್ವಿಕೆಯನ್ನು ಉತ್ತಮವಾಗಿಸಲು ಹಲವಾರು ಪ್ರಯತ್ನಗಳು, ಸಂಶೋಧನೆಗಳು ಆಗಿದ್ದು, ಇದರಿಂದ ಕಂಡುಕೊಂಡ ಹಲವಾರು ಪರಿಹಾರ ಮಾರ್ಗಗಳಲ್ಲಿ ನಾಗರಿಕ ಸಮಾಜವೂ ಒಂದಾಗಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಆಡಳಿತದ ಸಾಧನವಾಗಿ ನಾಗರಿಕ ಸಮಾಜದ ಪಾತ್ರ ಎನ್ನುವ ಲೇಖನ ಪ್ರಸ್ತುತವೆನಿಸುತ್ತದೆ.

## KEYWORDS:

ಉತ್ತಮ ಆಡಳಿತ, ನಾಗರಿಕ ಸಮಾಜ, ಆಳ್ವಿಕೆ, ಸಾಮಾಜಿಕ ಬಂಡವಾಳ, ಮೂರನೇ ವಲಯ.

### ಪೀಠಿಕೆ:

ನಮ್ಮಲ್ಲಿ ಪ್ರತಿಯೊಬ್ಬರ ನಿರೀಕ್ಷೆ ಮತ್ತು ಆಕಾಂಕ್ಷೆ ಎಂದರೆ ನಮ್ಮ ಸರ್ಕಾರ ಉತ್ತಮ ಮತ್ತು ಪರಿಣಾಮಕಾರಿಯಾಗಿರಬೇಕು ಎಂಬುದಾಗಿದೆ. ವಾಸ್ತವದಲ್ಲಿ ನಮಗೆ ತಿಳಿದಿರುವ ಹಾಗೆ ಗ್ರೀಕ್ ರಾಜಕೀಯ ತತ್ವಜ್ಞಾನಿ ಅರಿಸ್ಟಾಟಲ್ ಹೇಳುವಂತೆ "ರಾಜ್ಯವು ಮಾನವನ ಅಗತ್ಯಕ್ಕೆ ಹುಟ್ಟಿಕೊಂಡಿದ್ದು, ಅದು ಮುಂದುವರೆಯುತ್ತಿರುವುದು ಇನ್ನು ಹೆಚ್ಚಿನ ಅಗತ್ಯಗಳಿಗೆ ಎಂದಿದ್ದಾರೆ". ಭಾರತದ ಪ್ರಾಚೀನ ರಾಜಕೀಯ ಚಿಂತಕ ಕೌಟಿಲ್ಯರವರು ಹೇಳುವಂತೆ ರಾಜ್ಯವು ಮಾನವನ ಉತ್ತಮ ಭೌತಿಕ, ಮಾನಸಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯನ್ನು ಸಾಕಾರಗೊಳಿಸುವ ಬದ್ಧತೆಗೊಳಪಟ್ಟಿರುತ್ತದೆ. ಈ ರಾಜ್ಯದ ಉದ್ದೇಶಗಳನ್ನು ಈಡೇರಿಸಲು ಸರ್ಕಾರ ಎನ್ನುವ ವ್ಯವಸ್ಥೆ ಎಲ್ಲಾ ರಾಜ್ಯಗಳಲ್ಲೂ ಅಸ್ತಿತ್ವದಲ್ಲಿದ್ದು, ಸರ್ಕಾರ ಪದ್ಧತಿಗಳಲ್ಲಿ ವ್ಯತ್ಯಾಸವಿದ್ದು, ಈ ಎಲ್ಲಾ ಸರ್ಕಾರ ಪದ್ಧತಿಗಳಲ್ಲಿ ಪ್ರಜಾಪ್ರಭುತ್ವ ಸರ್ಕಾರ ಉತ್ತಮ ಸರ್ಕಾರ ಪದ್ಧತಿ ಎಂದು ಪರಿಗಣಿಸಲಾಗಿದೆ. ಈ ಸರ್ಕಾರ ಪದ್ಧತಿಯಲ್ಲಿ ವ್ಯಕ್ತಿಗಳಿಗೆ ಆಲೋಚನಾ, ಅಭಿವ್ಯಕ್ತಿ, ನಂಬಿಕೆ ಮತ್ತು ಆರಾಧನೆಯಂತಹ ಹಲವು ಸ್ವಾತಂತ್ರ್ಯಗಳಿದ್ದು, ಎಲ್ಲರ ಅಭಿಪ್ರಾಯಕ್ಕೆ ಮತ್ತು ಭಾಗವಹಿಸುವಿಕೆಗೆ ಅವಕಾಶವಿದೆ. ಈ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಹಲವಾರು ಅಗತ್ಯಾಂಶಗಳು ಅಗತ್ಯ ಆದರೆ ಬಹುಪಾಲು ಸಂದರ್ಭದಲ್ಲಿ ವ್ಯವಸ್ಥೆಯಲ್ಲಿ ಆಳುವಂತಹ

ವ್ಯಕ್ತಿಗಳ ಬೇಜವಾಬ್ದಾರಿ, ವಿವೇಕ ರಹಿತವಾದ, ಸ್ವಾರ್ಥವಾದ, ದೂರದೃಷ್ಟಿರಹಿತವಾದ ವಿಧಾನಗಳು ಹಾಗೂ ನೀತಿಗಳು ಮತ್ತು ಅನುಷ್ಠಾನದ ವಿಳಂಬತೆ, ತಾರತಮ್ಯ ಮತ್ತು ಸ್ವಹಿತಾಸಕ್ತಿಯಿಂದ ಇಂದು ಹಲವು ಅವಕಾಶಗಳಿಂದ ಜನ ವಂಚಿತವಾಗಿ ಘನತೆಯ ಬದುಕಿಗೆ ಧಕ್ಕೆಯಾಗಿ ಹಲವಾರು ತೊಂದರೆಗಳನ್ನು ಅನುಭವಿಸುವುದನ್ನೇ ಪ್ರಜಾಪ್ರಭುತ್ವ ವಿರೋಧಿ ಹಾಗೂ ಅಪ್ರಜಾಸತ್ತಾತ್ಮಕ ಅಸಂವಿಧಾನಿಕ ಸರ್ಕಾರ ಎಂದು ಕರೆಯಲಾಗುತ್ತದೆ. ಈ ಅಪ್ರಜಾಸತ್ತಾತ್ಮಕ ಸರ್ಕಾರವನ್ನು ಪ್ರಜಾಪ್ರಭುತ್ವ ಸರ್ಕಾರವನ್ನಾಗಿಸಲು ಹುಟ್ಟಿಕೊಂಡ ಸುಧಾರಿತ ರೂಪವೇ "ಉತ್ತಮ ಸರ್ಕಾರ" ಹಾಗೂ ಸುಶಾಸನ ಎಂದು ಕರೆಯಲಾಗುತ್ತದೆ. ಪ್ರಜಾಸತ್ತಾತ್ಮಕ ಸರ್ಕಾರಗಳು ಅಪ್ರಜಾಸತ್ತಾತ್ಮಕ ಸರ್ಕಾರಗಳಾಗಿ ಪರಿವರ್ತನೆಯಾದಾಗ ಅವುಗಳನ್ನು ವ್ಯಕ್ತಿಗಳು ಸರಿದಾರಿಗೆ ತರಲು ವ್ಯಕ್ತಿಗಳಿಗೆ ವೈಯಕ್ತಿಕವಾಗಿ ಸಾಧ್ಯವಾಗದಿದ್ದಾಗ ಸಾಮೂಹಿಕವಾಗಿ ಪ್ರತಿಭಟಿಸಲು ಕಂಡುಕೊಂಡ ವ್ಯವಸ್ಥೆಯೇ ನಾಗರಿಕ ಸಮಾಜವಾಗಿದ್ದು, ಸರ್ಕಾರಗಳು ಉತ್ತಮವಾಗಿ ಮೂಲ ಉದ್ದೇಶಗಳ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಲು ಸದಾ ಎಚ್ಚರಿಸುವ ಕಾರ್ಯವನ್ನು ಮಾಡುವ ಸಾಮಾಜಿಕ ಬಂಡವಾಳದಂತಿರುವ 3ನೇ ವಲಯವೇ ನಾಗರಿಕ ಸಮಾಜವಾಗಿದೆ. ನಾವು ಇಂದು ಸಾಂಸದಿಕ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಹೊಂದಿದ್ದು, ನಿರ್ಧಾರ ತೆಗೆದುಕೊಳ್ಳುವ ಕಾರ್ಯವನ್ನು ಪ್ರತಿನಿಧಿಗಳಿಂದ ಕೂಡಿದ ಒಂದು ಸಣ್ಣ ಗುಂಪಿಗೆ ನೀಡಲಾಗಿದೆ ಇಲ್ಲಿ ಜನರಿಗೆ ನೇರವಾಗಿ ಪಾಲ್ಗೊಳ್ಳುವಿಕೆಗೆ ಅವಕಾಶವಿಲ್ಲದಿರುವ ಕಾರಣ ಪ್ರತಿನಿಧಿಗಳಲ್ಲಿ ಸ್ವಹಿತಾಸಕ್ತಿ ಮತ್ತು ಸ್ವಜನ ಪಕ್ಷಪಾತ ಹೆಚ್ಚಾಗಿ ಪ್ರಜಾಪ್ರಭುತ್ವ ವ್ಯಾಪಾರೀಕರಣವಾಗಿರುವುದರಿಂದ ಸಿದ್ಧಾಂತ ಮತ್ತು ಆಚರಣೆ ಅಥವಾ ತತ್ವ ಮತ್ತು ಆಚರಣೆಯಲ್ಲಿ ಕಂದಕ ಉಂಟಾಗಿದ್ದು, ಇದನ್ನು ಬೆಸೆಯುವ ಮೂರನೆ ವಲಯ ಅಗತ್ಯವಾಯಿತು ಅದೇ ನಾಗರಿಕ ಸಮಾಜವಾಗಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಆಡಳಿತದಲ್ಲಿ ನಾಗರಿಕ ಸಮಾಜದ ಪಾತ್ರವನ್ನು ವಿಶ್ಲೇಷಿಸುವ ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**ಸಂಶೋಧನಾ ವಿಧಾನ:**

ಉತ್ತಮ ಆಡಳಿತದ ಸಾಧನವಾಗಿ ನಾಗರಿಕ ಸಮಾಜ ಎನ್ನುವ ಈ ಲೇಖನದಲ್ಲಿ ಈ ಕೆಳಕಂಡ ಉದ್ದೇಶಗಳನ್ನು ಹೊಂದಲಾಗಿದೆ.

**ಅಧ್ಯಯನದ ಉದ್ದೇಶಗಳು:**

1. ಉತ್ತಮ ಆಡಳಿತದ ಅರ್ಥ ಮತ್ತು ಲಕ್ಷಣಗಳನ್ನು ತಿಳಿಯುವುದು.
2. ನಾಗರಿಕ ಸಮಾಜದ ಅರ್ಥ, ಬೆಳವಣಿಗೆ ಮತ್ತು ಕಾರ್ಯಗಳನ್ನು ಗುರುತಿಸುವುದು.
3. ಉತ್ತಮ ಆಡಳಿತದ ಸಾಧನವಾಗಿ ನಾಗರಿಕ ಸಮಾಜದ ಪಾತ್ರವನ್ನು ಪರಿಶೀಲಿಸುವುದು.
4. ಭಾರತದಲ್ಲಿ ಉತ್ತಮ ಆಡಳಿತಕ್ಕೆ ಕಾರಣವಾಗಿರುವ ನಾಗರಿಕ ಸಮಾಜ ಸಂಘಟನೆಗಳನ್ನು ಗುರುತಿಸುವುದು ಹಾಗೂ ಅವುಗಳ ಸಾಧನೆಗಳೇನು ಎಂಬುದನ್ನು ಗುರುತಿಸುವುದು.

**ಮಾಹಿತಿಯ ಆಧಾರ:** ಈ ಲೇಖನವು ಆನುಷಂಗಿಕ ಮಾಹಿತಿಯನ್ನು ಆಧರಿಸಿದ್ದು, ವಿವಿಧ ಸಾಹಿತ್ಯ ಅಧ್ಯಯನ, ವರದಿ, ಪುಸ್ತಕಗಳು, ಸಂಶೋಧನಾ ಲೇಖನಗಳು, ಮಾಸಪತ್ರಿಕೆ, ದಿನಪತ್ರಿಕೆಗಳ ಲೇಖನ ಹಾಗೂ ಅಂತರ್ಜಾಲದ ಮಾಹಿತಿಯನ್ನು ಆಧರಿಸಿದೆ.

ಉತ್ತಮ ಆಡಳಿತದ ಅರ್ಥ ಮತ್ತು ಲಕ್ಷಣಗಳು– ಉತ್ತಮ ಆಡಳಿತ ಇದನ್ನು ಒಳ್ಳೆಯ ಆಡಳಿತ ಎಂತಲೂ ಕರೆಯುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಹಲವು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ ವೆಬ್‌ಸ್ಟರ್ ವಿಶ್ವಕೋಶದಲ್ಲಿ ಆಳ್ವಿಕೆಯೆಂದರೆ ಸರ್ಕಾರದ

ವಿಧಾನ, ಪದ್ಧತಿ ಅಥವಾ ಕಾರ್ಯವಿಧಾನ. ಉತ್ತಮ ಆಳ್ವಿಕೆ ಎಂಬುದು ಆಡಳಿತದ ಉತ್ಕೃಷ್ಟತೆಯನ್ನು ಅಂದರೆ ಗುಣಾತ್ಮಕತೆಯನ್ನು ಅಭಿವ್ಯಕ್ತಗೊಳಿಸುವುದಾಗಿದೆ. ಇದನ್ನೇ 1993ರಲ್ಲಿ ಚಿಂತಕರಾದ ಆಲ್ ಗೋರ್ ರವರು National Performance Review ವರದಿಯಲ್ಲಿ ಉತ್ತಮ ಆಳ್ವಿಕೆ ಬದಲಾಗಿ ಪ್ರಜಾಸತ್ತಾತ್ಮಕ ಆಳ್ವಿಕೆ ಎಂಬುದನ್ನು ಬಳಸಿದ್ದಾರೆ. ಚಿಂತಕರಾದಂತಹ ಮಿಲ್ಟನ್.ಜೆ ಈಸ್ಟನ್ ಉತ್ತಮ ಆಳ್ವಿಕೆ ಎಂಬುದಕ್ಕೆ ಭಿನ್ನವಾದಂತಹ ಅರ್ಥವನ್ನು ನೀಡಿ ಅದರಲ್ಲಿ ಮಾನವೀಯತೆಯನ್ನು ಆಧರಿಸಿರುವರು. ಇವರ ಪ್ರಕಾರ ಆಳ್ವಿಕೆ ಎಂದರೆ ಮಾನವನ ಹಕ್ಕುಗಳು, ಆಸ್ತಿ ಹಕ್ಕುಗಳನ್ನು ರಕ್ಷಣೆ ಮಾಡಿ ಸಮಾಜದಲ್ಲಿ ಉಂಟಾಗುವ ಘರ್ಷಣೆಗಳನ್ನು ಶಮನಗೊಳಿಸುವ, ರಾಜಕೀಯ ಸ್ಥಿರತೆ ಹಾಗೂ ಭದ್ರತೆಯನ್ನು ಕಾಯುವುದು ಎಂದಿದ್ದಾರೆ. ಹೀಗೆ ಬೇರೆ ಬೇರೆಯವರು ಬೇರೆ ಬೇರೆ ಅರ್ಥವನ್ನು ನೀಡಿದ್ದಾರೆ. ಅದು ಏನೇ ಇರಲಿ ಉತ್ತಮ ಆಡಳಿತ ಎನ್ನುವ ಪರಿಕಲ್ಪನೆ. ಆಡಳಿತದಲ್ಲಿ ಇತ್ತೀಚೆಗೆ ಸೇರಿಕೊಂಡ ಪದವಾಗಿದ್ದರೂ ಇದರ ಮೂಲವನ್ನು 17ನೇ ಶತಮಾನದಲ್ಲಿಯೇ ಗುರುತಿಸಬಹುದು. ಇದನ್ನು ಮೊಟ್ಟಮೊದಲ ಬಾರಿಗೆ 1625ರಲ್ಲಿ ಬಳಸಲಾಯಿತು. ಆದರೆ ಇದು 1990ರ ರಚನಾತ್ಮಕ ಹಾಗೂ ಹೊಂದಾಣಿಕೆಯ ಪ್ರಾಶಸ್ತ್ಯದ ನಂತರ ಹಾಗೂ ಶೀತಲ ಸಮರದ ಅಂತ್ಯದ ನಂತರ ತೃತೀಯ ಜಗತ್ತಿನ ರಾಷ್ಟ್ರಗಳನ್ನು ಹೇಗೆ ಪುನರ್ ನಿರ್ಮಾಣ ಮಾಡಬೇಕೆನ್ನುವ ಸಂದರ್ಭದಲ್ಲಿ ಹೆಚ್ಚು ಮಹತ್ವ ಪಡೆಯಿತು. ಈ ಸಂದರ್ಭದಲ್ಲಿ ಎರಡು ವಿಷಯಗಳ ಕಡೆಗೆ ಬೆಳಕು ಚೆಲ್ಲಲಾಯಿತು.

1. ಹೆಚ್ಚು ಪರಿಣಾಮಕಾರಿಯಾದ, ನ್ಯಾಯಸಮ್ಮತ ಮತ್ತು ಆಡಳಿತಾತ್ಮಕ ನೀತಿ ನಿರೂಪಣಾ ಸಂಸ್ಥೆಗಳ ಸ್ಥಾಪನೆ.
2. ಚಲನಶೀಲ ನಾಗರಿಕ ಸಮಾಜದ ಮೂಲಕ ಬಡಜನರನ್ನು ಸಬಲೀಕರಣ ಮಾಡುವುದು ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವುದಾಗಿದೆ. ಉತ್ತಮ ಆಡಳಿತದ ಲಕ್ಷಣಗಳ ಬಗ್ಗೆ ಹಲವಾರು ಚಿಂತಕರು, ಜಾಗತಿಕ ಬ್ಯಾಂಕ್ ಹಾಗೂ ಯು.ಎನ್.ಡಿ.ಪಿ ಯಂತಹ ಸಂಸ್ಥೆಗಳು ಗುರುತಿಸಿದ್ದು, ಎಲ್ಲದರ ಒಟ್ಟಾರೆ ಲಕ್ಷಣಗಳನ್ನು ಈ ರೀತಿ ಗುರುತಿಸಲಾಗಿದೆ.
3. ಕಾನೂನಿನ ಆಳ್ವಿಕೆ.
4. ಪಾರದರ್ಶಕತೆ
5. ಜವಾಬ್ದಾರಿಯುತ
6. ಸಮ್ಮತಿಯುತ
7. ಸಮಾನತೆ ಮತ್ತು ಒಳಗೊಳ್ಳುವಿಕೆ
8. ಪರಿಣಾಮಕಾರಿ ಮತ್ತು ಸಮರ್ಥ
9. ಉತ್ತರದಾಯಿತ್ವ
10. ಪಾಲ್ಗೊಳ್ಳುವಿಕೆ ಆಡಳಿತವಾಗಿದೆ.

ನಾಗರಿಕ ಸಮಾಜದ ಅರ್ಥ, ಬೆಳವಣಿಗೆ ಮತ್ತು ಕಾರ್ಯಗಳು: ರಾಜಕೀಯ ವಿವೇಚನೆಯ ಕುರಿತ ಎಲ್ಲಾ ಸಿದ್ಧಾಂತಗಳಲ್ಲಿ ನಾಗರಿಕ ಸಮಾಜವನ್ನು ವಿವಿಧ ರೀತಿಯಲ್ಲಿ ಅರ್ಥೈಸಲಾಗಿದೆ. ಅದನ್ನೊಂದು ಸಾಮಾಜಿಕ ಮೌಲ್ಯವೆಂದು ವಿವರಿಸಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಯಾವುದೇ ಲಾಭದ ಅಥವಾ ಅನುಕೂಲದ ಉದ್ದೇಶವಿಲ್ಲದೆ ಪೌರರು ಪರಸ್ಪರ ಅನೇಕ ಬಗೆಯ ಸಂಬಂಧಗಳನ್ನು ಹೊಂದಿರುವ ರಾಜ್ಯದ ಹಸ್ತಕ್ಷೇಪ ಅಥವಾ

ನಿರ್ದೇಶನವಿಲ್ಲದ ವ್ಯವಸ್ಥೆಯೇ ನಾಗರಿಕ ಸಮಾಜವೆನ್ನಬಹುದು. ಇದು ಸಮಾಜದ ಒಂದು ಭಾಗ. ನಾಗರಿಕರು ಅಲ್ಲದ ವ್ಯಾಪಾರಸ್ಥರು, ಕಾರ್ಮಿಕ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ವಿಶ್ವಾಸದ ಸಮುದಾಯಗಳು, ಸಂಸದರು, ಶಾಸಕರು, ಪತ್ರಕರ್ತರು, ಶಿಕ್ಷಣತಜ್ಞರು ಒಳಗೊಳ್ಳುವಂತೆ ನಾಗರಿಕ ಸಮಾಜವನ್ನು ವ್ಯಾಪಕಾರ್ಥದಲ್ಲಿ ವ್ಯಾಖ್ಯಾನಿಸಿದೆ. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ ನಾಗರಿಕ ಸಮಾಜದ ಉಗಮ ಮತ್ತು ವಿಕಾಸದ ಕುರಿತಾಗಿ ತಿಳಿದುಕೊಳ್ಳಲು ಹದಿನೇಳನೆ ಶತಮಾನದಷ್ಟು ಹಿಂದಕ್ಕೆ ಅಂದರೆ ಸಿಸಿರೋನ ಸರಳ ಅಭಿಪ್ರಾಯದಿಂದ ಬರ್ಕ್‌ನ ಮುಕ್ತ ಜನರ ಸಣ್ಣ ತುಕಡಿವರೆಗೆ ಹೋಗಬೇಕಾಗುತ್ತದೆ.

ಜಿ.ಡಬ್ಲ್ಯೂ.ಎಫ್.ಹೆಗಲ್‌ಗಿಂತ ಮುಂಚೆ ಹಾಬ್ಸ್ ಮತ್ತು ಲಾಕ್ ಅವರು State ಮತ್ತು Civil Society ಪದಗಳನ್ನು ಪರಸ್ಪರ ಬದಲಾಗುವಂತೆ (ಆದಲು ಬದಲು) ಬಳಸಿದರು. Civil Society ಮತ್ತು State ಪದಗಳನ್ನು ಮೊದಲು ಪ್ರತ್ಯೇಕಗೊಳಿಸಿದವನು ರಾಜಕೀಯ ಚಿಂತಕ ಹೆಗಲ್. ಅವರು ಹತ್ತೊಂಬತ್ತನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗಲ್ಸ್ ಅವರ ಅನುಯಾಯಿಯಾಗಿದ್ದನು. ಇಪ್ಪತ್ತನೇ ಶತಮಾನದಲ್ಲಿ ಅಂಟೋನಿಯೊ ಗ್ರಾಂಸ್ಕಿ Civil Society ಯ ಕಲ್ಪನೆಯನ್ನು ವಿಶ್ಲೇಷಿಸಿದರು. ಅವನ ವಿಶ್ಲೇಷಣೆ ಹೆಗಲ್ ಮತ್ತು ಕಾರ್ಲ್ ಮಾರ್ಕ್ಸ್ ಅವರ ಅಭಿಪ್ರಾಯಗಳಿಗೆ ತದ್ವಿರುದ್ಧವಾಗಿದ್ದು ಅವನು ಮುಖ್ಯವಾಗಿ ಚರ್ಚ್, ಶಾಲೆ, ಕಾಲೇಜು, ವರ್ತಮಾನ ಪತ್ರಿಕೆ, ರೇಡಿಯೋ, ಕಾರ್ಮಿಕ ಸಂಘಗಳು ಮತ್ತು ರಾಜಕೀಯ ಪಕ್ಷಗಳು ಸೇರಿದಂತೆ ಉನ್ನತ ಮಟ್ಟದ ಸಂಸ್ಥೆಗಳನ್ನು ವರ್ಣಿಸಿದನು ಅಂದರೆ ಸಮಾಜದ ಬೌದ್ಧಿಕ ಮತ್ತು ನೈತಿಕ ಜೀವನದಲ್ಲಿ ಎಲ್ಲಾ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ.

ನಾಗರಿಕ ಸಮಾಜದ ಕಾರ್ಯಗಳು: ಆಧುನಿಕ ವ್ಯವಸ್ಥೆಯಲ್ಲಿ ನಾಗರಿಕ ಸಮಾಜವನ್ನು ಮೂರನೆ ವಲಯವೆಂದು ಪರಿಗಣಿಸಲಾಗುತ್ತಿದ್ದು ಸಾರ್ವಜನಿಕ, ಖಾಸಗಿ ವಲಯದ ನಂತರ ಮೂರನೆಯದು ಇದಾಗಿದೆ. ಇದು ಲಾಭರಹಿತ ವಲಯ ಸಾಂಘಿಕ ಜೀವನ ಇದರ ಉದ್ದೇಶ. ಪಾರದರ್ಶಕತೆ, ಪರಿಣಾಮಕಾರಿತ್ವ, ಮುಕ್ತತೆ, ಹೊಣೆಗಾರಿಕೆ ಒಳಗೊಂಡ ಉತ್ತಮ ಆಡಳಿತಕ್ಕೆ ಮಾರ್ಗದರ್ಶಿಯಾಗುತ್ತದೆ. ಉತ್ತಮ ಆಡಳಿತವನ್ನು ಪೋಷಿಸಿ ಬೆಳೆಸುತ್ತದೆ. ಇದು ಮೊದಲು ಆಡಳಿತ ನಿಯಂತ್ರಣವನ್ನು ವಿಶ್ಲೇಷಿಸುತ್ತದೆ. ಅನಂತರ ಸಾಮಾಜಿಕ ಬಂಡವಾಳವನ್ನು ಸಮರ್ಥಿಸುತ್ತದೆ. ಮೌಲ್ಯಗಳು, ನಂಬಿಕೆಗಳು ಮತ್ತು ಪ್ರಜಾಸತ್ತಾತ್ಮಕ ರೀತಿ ರಿವಾಜುಗಳನ್ನು ಗುರುತಿಸಿ ಆಚರಣೆಗೆ ತರಲು ನಾಗರಿಕರನ್ನು ಅಣಿಗೊಳಿಸುತ್ತದೆ. ಇದು ದುರ್ಬಲ ವರ್ಗಗಳನ್ನು ಸಂಘಟಿಸುತ್ತದೆ ಮತ್ತು ರಾಜಕೀಯ ಹಾಗೂ ಸಾಮಾಜಿಕ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು ಸಮುದಾಯದ ಕಡೆಯ ವ್ಯಕ್ತಿಗಳನ್ನು ಸಮುದಾಯದ ಮಧ್ಯಭಾಗಕ್ಕೆ ತಂದು ನಿಲ್ಲಿಸುತ್ತದೆ ಮತ್ತು ಆ ಮೂಲಕ ಅವರ ಜೀವನಮಟ್ಟ ಸುಧಾರಣೆಗೆ ಅಭಿವೃದ್ಧಿಯ ರಾಜಮಾರ್ಗವನ್ನು ರೂಪಿಸುತ್ತದೆ. ಪ್ರಜಾಪ್ರಭುತ್ವವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅದು ನಿರ್ವಹಿಸುವ ಕೆಲಸಗಳನ್ನು ಕೆಳಕಂಡಂತೆ ಗುರುತಿಸಬಹುದು.

1. ಕಾವಲುನಾಯಿ – ನಾಗರಿಕ ಸಮಾಜವು ಪ್ರಜಾಪ್ರಭುತ್ವವನ್ನು ರಕ್ಷಿಸುವ, ಜನರ ಹಕ್ಕುಗಳ ಉಲ್ಲಂಘನೆ ಮತ್ತು ಸರ್ಕಾರದ ದುರಾಡಳಿತ, ಅದರ ಜನವಿರೋಧಿ ನೀತಿ, ಅದರಿಂದ ಜನರಿಗಾಗುವ ತೊಂದರೆಗಳ ಬಗ್ಗೆ ಸದಾ ಜನರನ್ನು ಜಾಗೃತಗೊಳಿಸುವ ರೀತಿಯಲ್ಲಿರುತ್ತದೆ.
2. ಸಲಹೆಗಾರ – ಸಮಾಜದ ಅಂಚಿಗೆ ತಳ್ಳಲ್ಪಟ್ಟಿರುವ ಸೌಲಭ್ಯ ವಂಚಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಕ್ರಮಕೈಗೊಳ್ಳಲು ಅದು ಸರ್ಕಾರಕ್ಕೆ ಸಲಹೆ ನೀಡುತ್ತದೆ.

3. ಚಳುವಳಿಗಾರ – ನೊಂದವರ, ಸಂತ್ರಸ್ತರ, ತೊಂದರೆಗೀಡಾದಂತಹ ಜನರ ಪರವಾಗಿ ಸರ್ಕಾರದ ವಿರುದ್ಧ ಚಳುವಳಿ ನಡೆಸುತ್ತದೆ.
4. ಶಿಕ್ಷಕ – ಜನರಿಗೆ ಇರುವ ಹಕ್ಕುಗಳು, ಅವುಗಳ ಉಲ್ಲಂಘನೆ ಹಾಗೂ ರಕ್ಷಣೆಯ ಬಗ್ಗೆ ಜನರಿಗೆ ಶಿಕ್ಷಣವನ್ನು ನೀಡುತ್ತದೆ.
5. ಸೇವಕ (Service Provider) – ಸರ್ಕಾರಗಳು ಅಥವಾ ಅಧಿಕಾರಿಗಳು ಯಾವ ಕ್ಷೇತ್ರವನ್ನು ತಲುಪಿಲ್ಲವೋ ಅಂತವರಿಗೆ ಸೇವೆ ಒದಗಿಸುತ್ತವೆ.
6. ಸಾರ್ವಜನಿಕ ಅಭಿಪ್ರಾಯದ ಸೃಷ್ಟಿಕರ್ತ – ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಜನರ ಅಭಿಪ್ರಾಯವನ್ನು ಕ್ರೋಢೀಕರಿಸುತ್ತದೆ ಮತ್ತು ಜನರನ್ನು ಜಾಗೃತಗೊಳಿಸುತ್ತದೆ.
7. ನಿಯಂತ್ರಕ – ನಾಗರಿಕ ಸಮಾಜದ ಪಾತ್ರವೆಂದರೆ ರಾಜ್ಯದ ಅಧಿಕಾರವನ್ನು ಮಿತಿಗೊಳಿಸುವುದು ಮತ್ತು ನಿಯಂತ್ರಿಸುವುದು ಅಂದರೆ ಅದರ ಸರ್ವಾಧಿಕಾರಕ್ಕೆ ಎಡೆಮಾಡಿಕೊಡದೆ ನಿಯಂತ್ರಣದಲ್ಲಿರುವಂತೆ ನೋಡಿಕೊಳ್ಳುವುದು.
8. ಮೇಲ್ವಿಚಾರಕ – ನಾಗರಿಕ ಸಮಾಜವು ಯಾವಾಗಲೂ ರಾಜ್ಯದ ಅಧಿಕಾರಗಳು ಹೇಗೆ ಚಲಾವಣೆಯಾಗುತ್ತವೆ, ಅಧಿಕಾರಿಗಳು ಅಧಿಕಾರಗಳನ್ನು ಹೇಗೆ ಉಪಯೋಗಿಸುತ್ತಾರೆ ಎಂಬುದನ್ನು ಅವಲೋಕಿಸುತ್ತಾ, ಅಧಿಕಾರ ದುರಪಯೋಗದ ವಿರುದ್ಧ ನಾಗರಿಕ ಸಮಾಜವು ಸಾರ್ವಜನಿಕರಿಗೆ ಸಂಬಂಧಿಸಿದ ವಿಷಯಗಳಿಗೆ ಧ್ವನಿ ಎತ್ತುತ್ತದೆ.
9. ಉತ್ತಮ ಆಡಳಿತಕ್ಕೆ ಲಾಬಿದಾರ – ಸಾರ್ವಜನಿಕ ಅಧಿಕಾರಿಗಳ ಭ್ರಷ್ಟಾಚಾರವನ್ನು ಹೊರತೆಗೆಯುವುದು ಮತ್ತು ಉತ್ತಮ ಸರ್ಕಾರಕ್ಕೆ ಲಾಬಿ ಮಾಡುವುದು ಇದರ ಉದ್ದೇಶವಾಗಿದ್ದು, ಇಂದು ಭ್ರಷ್ಟಾಚಾರ ವಿರೋಧಿ ಕಾನೂನುಗಳು ಮತ್ತು ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೂ ನಾಗರಿಕ ಸಮಾಜವು ಕ್ರಿಯಾಶೀಲ ಮತ್ತು ಪರಿಣಾಮಕಾರಿಯಾಗಿಲ್ಲದಿದ್ದರೆ ಸರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ.
10. ರಾಜಕೀಯ ಶಿಕ್ಷಕ & ಪ್ರೋತ್ಸಾಹದಾರ – ನಾಗರಿಕ ವ್ಯಕ್ತಿಯು ಪ್ರಜಾಪ್ರಭುತ್ವದ ಸದಸ್ಯನಾಗಿ ಅವನಿಗಿರುವ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಶಿಕ್ಷಿತನನ್ನಾಗಿ ಮಾಡಿ, ರಾಜಕೀಯ ಭಾಗವಹಿಸುವಿಕೆಗೆ ಪ್ರೋತ್ಸಾಹಿಸುತ್ತದೆ.
11. ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಕ – ನಾಗರಿಕ ಸಮಾಜವು ಪ್ರಜಾಪ್ರಭುತ್ವದ ಇತರ ಮೌಲ್ಯಗಳಾದ ಪ್ರಜಾಸತ್ತಾತ್ಮಕ ಜೀವನ, ಸಹಿಷ್ಣುತೆ, ಆಧುನೀಕರಣ, ರಾಜಿ, ವಿರೋಧಿಗಳ ನಿಲುವುಗಳನ್ನು ಗೌರವಿಸುವಂತಹ ಈ ತರಹದ ಆಳವಾದಂತಹ ಸಂಸ್ಕೃತಿ ಇಲ್ಲದಿದ್ದರೆ ಪ್ರಜಾಪ್ರಭುತ್ವವನ್ನು ಸರಳವಾಗಿ ಹೇಳಲಾಗುವುದಿಲ್ಲ. ಈ ರೀತಿಯ ಮೌಲ್ಯಗಳು ಬೆಳವಣಿಗೆ ಹೊಂದಲು ನಾಗರಿಕ ಸಮಾಜ ಸಹಾಯ ಮಾಡುತ್ತದೆ.
12. ಹಿತಾಸಕ್ತಿಗಳ ರಕ್ಷಕ – ನಾಗರಿಕ ಸಮಾಜ ವಿಭಿನ್ನ ಹಿತಾಸಕ್ತಿಗಳನ್ನು ವ್ಯಕ್ತಪಡಿಸಲು ಇರುವ ವೇದಿಕೆ ಮತ್ತು ತನ್ನ ಸದಸ್ಯರಾದ ಮಹಿಳೆಯರು, ವಿದ್ಯಾರ್ಥಿಗಳು, ರೈತರು, ಪರಿಸರವಾದಿಗಳು, ವ್ಯಾಪಾರಿ ಸಂಘದ ಸದಸ್ಯರು, ವಕೀಲರು, ವೈದ್ಯರ ಹಿತಾಸಕ್ತಿಗಳ ಪೂರೈಕೆಗೆ ಲಾಬಿ ಮಾಡುತ್ತದೆ.
13. ಸಂಘಟನಾಕಾರ – ನಾಗರಿಕ ಸಮಾಜದ ಹಳೆಯ ಮಾದರಿಯ ಮೌಲ್ಯಗಳಾದ ಪ್ರತ್ಯೇಕ ಬುಡಕಟ್ಟು, ಭಾಷೆ, ಧರ್ಮ ಮತ್ತು ಇತರೆ ಅಂಶಗಳ ಆಧಾರದ ಮೇಲೆ ಪ್ರತ್ಯೇಕವಾಗಿ ಗುರುತಿಸಿಕೊಳ್ಳುವಿಕೆ ಬದಲಾಗಿ ಎಲ್ಲಾ ಜನರ ಸಾಮಾನ್ಯ ಹಿತಾಸಕ್ತಿಯನ್ನು

ವ್ಯಕ್ತಪಡಿಸುತ್ತದೆ. ಯಾವಾಗ ಸಾಮಾನ್ಯ ಹಿತಾಸಕ್ತಿಯ ಆಧಾರದ ಮೇಲೆ ಮಹಿಳೆಯರು, ಕಲಾವಿದರು, ವಕೀಲರು, ಮಾನವ ಹಕ್ಕುಗಳ ಹೋರಾಟಗಾರರು, ಕಾರ್ಮಿಕರು, ಪರಿಸರವಾದಿಗಳು, ಇತರೆ ನಾಗರಿಕರು ಒಂದುಗೂಡಿದರೆ ನಾಗರಿಕ ಜೀವನ ಸಮೃದ್ಧ, ಸಾಂಕೇತಿಕ ಮತ್ತು ಸಾಮರಸ್ಯದಿಂದ ಕೂಡಿರುತ್ತದೆ.

14. ರಾಜಕೀಯ ನೇಮಕಾತಿ ಮತ್ತು ತರಬೇತಿ ಸಂಸ್ಥೆ – ನಾಗರಿಕ ಸಮಾಜವು ಭವಿಷ್ಯಕ್ಕಾಗಿ ರಾಜಕೀಯ ನಾಯಕರಿಗೆ ತರಬೇತಿಯನ್ನು ಒದಗಿಸುತ್ತದೆ. ಯಾರು ಸಾರ್ವಜನಿಕ ಹಿತಾಸಕ್ತಿಗಳೊಂದಿಗೆ ಗುರುತಿಸಿಕೊಂಡಿರುತ್ತಾರೋ ಅಂತವರನ್ನು ಗುರುತಿಸಿ ಅವರಿಗೆ ರಾಷ್ಟ್ರ, ರಾಜ್ಯ, ಸ್ಥಳೀಯ ಮಹತ್ವದ ರಾಜಕೀಯ ಕಛೇರಿಗಳಿಗೆ ನೇಮಿಸುತ್ತದೆ.

15. ಚರ್ಚಾವೇದಿಕೆ – ನಾಗರಿಕ ಸಮಾಜವು ಬಹುಮುಖ್ಯವಾದ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಮಾಹಿತಿ ತಲುಪಿಸುತ್ತದೆ. ಈ ಕೆಲಸವನ್ನು ಸುದ್ದಿ ಮಾಧ್ಯಮಗಳು ಮಾತ್ರ ಮಾಡುವುದಿಲ್ಲ. ಸರ್ಕಾರೇತರ ಸಂಸ್ಥೆಗಳು ಸಾರ್ವಜನಿಕ ನೀತಿಗಳ ಬಗ್ಗೆ ಚರ್ಚೆಗೆ ವೇದಿಕೆ ಒದಗಿಸಿ ಅವುಗಳನ್ನು ಪಾರ್ಲಿಮೆಂಟಿನ ಗಮನಕ್ಕೆ ತರುವ ಮೂಲಕ ಸಮಾಜದ ವಿವಿಧ ಗುಂಪುಗಳ ಮೇಲೆ ಪರಿಣಾಮ ಬೀರುತ್ತವೆ.

16. ಸಂಯೋಜಕ ಮತ್ತು ಅನುಷ್ಠಾನಗಾರ – ನಾಗರಿಕ ಸಮಾಜ ಸಂಘಟನೆಗಳು ಸಂಘರ್ಷಗಳನ್ನು ಪರಿಹರಿಸಲು ಮಧ್ಯವರ್ತಿಯಾಗಿ ಕೆಲಸ ಮಾಡುತ್ತ, ಚುನಾವಣಾ ನೀತಿಗಳನ್ನು ನಿರ್ವಹಿಸಲು, ಅನುಷ್ಠಾನಗೊಳಿಸಲು ಪ್ರಮುಖ ಪಾತ್ರ ವಹಿಸುತ್ತವೆ.

ಪ್ರಜಾಪ್ರಭುತ್ವ ಸೈದ್ಧಾಂತಿಕವಾಗಿ ಅತ್ಯುತ್ತಮವಾದಂತಹ ಸರ್ಕಾರ ಪದ್ಧತಿಯಾಗಿದ್ದು ಅದೊಂದು ಸಾಮಾಜಿಕ ಕ್ರಮ, ಜೀವನವಿಧಾನ. ಇದು ಯಶಸ್ವಿಯಾಗಬೇಕಾದರೆ ಅದರ ಮೂಲ ಉದ್ದೇಶವಾದ ಜನರ ಪ್ರಭುತ್ವವಾಗಿಯೇ ಉಳಿಯಬೇಕಾದರೆ ಅದು ತನ್ನ ಸೈದ್ಧಾಂತಿಕ ಚೌಕಟ್ಟಿನ ಒಳಗಡೆಯೇ ಕಾರ್ಯ ನಿರ್ವಹಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಆದರೆ ಬಹುಪಾಲು ಸಂದರ್ಭಗಳಲ್ಲಿ ಆಳುವವರ ಸ್ವಾರ್ಥ, ವಿವೇಚನಾರಹಿತವಾದ ನೀತಿ, ಆಡಳಿತಗಾರರ ಸ್ಪಂದನಾರಹಿತ ಆಡಳಿತ ರೀತಿಗಳಿಂದ ಪ್ರಜಾಪ್ರಭುತ್ವ ನೈಜವಾಗಿಲ್ಲದ ಕಾರಣ ಕಳೆದ ಒಂದೆರಡು ದಶಕಗಳಲ್ಲಿ ರಾಷ್ಟ್ರೀಯ, ಸ್ಥಳೀಯ ನಾಗರಿಕ ಸಮಾಜ ಸಂಘಟನೆಗಳ ಪ್ರಭಾವ ಹೆಚ್ಚಾಗುತ್ತಾ ಅವುಗಳ ಕಾರ್ಯ ನೀತಿಗಳಲ್ಲಿ ಬದಲಾವಣೆಯಾಗುತ್ತಾ ಬಂದಿದೆ. ಸರ್ಕಾರೇತರ ಸಂಘಟನೆಗಳು, ಸಾಮುದಾಯಿಕ ಸಂಘಟನೆಗಳು, ವೃತ್ತಿಪರ ಸಂಘಟನೆಗಳು ಮತ್ತು ಇತರ ನಾಗರಿಕ ಸಮಾಜ ಸಮುದಾಯಗಳು ಬಡತನ ನಿವಾರಣೋಪಾಯಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಾ ಬಂದಿವೆ. ಅವುಗಳ ಪಾಲ್ಗೊಳ್ಳುವಿಕೆ ಆರೋಗ್ಯ, ಶಿಕ್ಷಣ, ಪರಿಸರ ರಕ್ಷಣೆ, ಸಾರ್ವಜನಿಕ ಸಂಪತ್ತಿನ ರಕ್ಷಣೆಯನ್ನು ಉತ್ತೇಜಿಸಿದೆ. ವಿಶ್ವಬ್ಯಾಂಕಿನ ಒಂದು ವರದಿಯ ಪ್ರಕಾರ ನಾಗರಿಕ ಸಮಾಜ ಸಂಘಟನೆಗಳು ಜಾಗತಿಕ ಅಭಿವೃದ್ಧಿ, ಹಣಕಾಸು ಮತ್ತು ಜಾಗತಿಕ ಹಾಗೂ ರಾಷ್ಟ್ರೀಯ ಸಾರ್ವಜನಿಕ ಕಾರ್ಯನೀತಿ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕಾರ್ಯನೀತಿ ಮತ್ತು ನಿರೂಪಕರ ಅವಶ್ಯಕತೆ ಕೂಡ ನಾಗರಿಕ ಸಂಘಟನೆಗಳಿಗೆ ಬಾಗಿಲು ತೆರೆದಿದೆ. ಉತ್ತಮ ಆಡಳಿತ ಮತ್ತು ಪಾರದರ್ಶಕತೆ ನಾಗರಿಕ ಸಮಾಜ ಸಂಘಟನೆಗಳನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರುತ್ತದೆ. ಸರ್ಕಾರದ ಕಾರ್ಯನೀತಿ ರೂಪಿಸುವುದಕ್ಕೆ, ಮಾಹಿತಿಗೆ ಹಾಗೂ ನೀತಿಗಳ ಅನುಷ್ಠಾನದಲ್ಲಿಯೂ ಇವುಗಳ ಮೇಲಿನ ಅವಲಂಬನೆ ಹೆಚ್ಚುತ್ತಿದ್ದು, ಇವುಗಳು ಜನರ ಆಶೋತ್ತರಗಳಿಗೆ ಕಾವಲುಗಾರರಂತೆ ಕಾರ್ಯನಿರ್ವಹಿಸುತ್ತಿವೆ.

ಭಾರತದಲ್ಲಿ ನಾಗರಿಕ ಸಮಾಜದ ಸೃಷ್ಟಿಯು ಭಾರತ ಸಂವಿಧಾನದ ಮೂಲಭೂತ ಹಕ್ಕುಗಳ ಸ್ವಾತಂತ್ರ್ಯದ ಹಕ್ಕಿನ 19(1), a, b, c ಗಳಲ್ಲಿಯ ಆಲೋಚನಾ ಅಭಿವ್ಯಕ್ತಿ, ಮುಕ್ತವಾಗಿ ಶಸ್ತ್ರರಹಿತವಾಗಿ ಸಭೆ ಸೇರುವ ಹಾಗೂ ಸಂಘ, ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ಇರುವ ಅವಕಾಶದಿಂದ ಸೃಷ್ಟಿಯಾಗಿದ್ದು, ಭಾರತದಲ್ಲಿ ಮುಂದುವರೆದ ರಾಷ್ಟ್ರಗಳಲ್ಲಿಯ ನಾಗರಿಕ ಸಮಾಜ ಸಂಘಟನೆಗಳಂತೆ ಪರಿಣಾಮಕಾರಿಯಾಗಿಲ್ಲ. ಆದರೂ, ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಸಾರ್ವಜನಿಕ ನೀತಿನಿರೂಪಣೆಯಲ್ಲಿ ಪಾಲ್ಗೊಳ್ಳುವ ಮೂಲಕ ನಾಗರಿಕ ಸಮಾಜ ಮಹತ್ವವನ್ನು ಪಡೆಯುತ್ತದೆ. ಸಮಕಾಲೀನ ಭಾರತದಲ್ಲಿ ಸಂವಿಧಾನದ ಉಲ್ಲಂಘನೆ, ಬಡವರ ಬಗ್ಗೆ ಕಾಳಜಿ, ವಿಶಿಷ್ಟ ಹಿತಾಸಕ್ತಿಗಳ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಮತ್ತು ಸಾರ್ವಜನಿಕ ಸಮಸ್ಯೆಗಳಲ್ಲಿ ಸ್ಪಂದಿಸದ ಸರ್ಕಾರದ ಧೋರಣೆ ವಿರುದ್ಧ ಜನರ ಪರವಾಗಿ ಸ್ಪಂದಿಸಿವೆ. ಕಳೆದ 50 ವರ್ಷಗಳಲ್ಲಿ ನಾಗರಿಕ ಸಮಾಜದ ಸ್ಥಾನಮಾನ ಕಾಲಕಾಲಕ್ಕೆ ಮರುವ್ಯಾಖ್ಯಾನಿಸುತ್ತಾ ನಾಗರಿಕ ಸಮಾಜ ಸಂಘಟನೆಗಳು ಪ್ರಮುಖ ಪಾತ್ರವಹಿಸುತ್ತಿದ್ದು ಅವುಗಳ ಉದ್ದೇಶ ಮತ್ತು ಸಾಧನೆ ಕೆಳಕಂಡಂತೆ ಇದೆ.

- » ನರ್ಮದಾ ಬಚಾವೋ ಆಂದೋಲನ – ಸರ್ದಾರ್ ಸರೋವರ ಅಣೆಕಟ್ಟು ಕಟ್ಟುವುದರಿಂದ ಸಂತ್ರಸ್ತರಾದಂತಹ ಜನರಿಗೆ ಪುನರ್ವಸತಿ ಮತ್ತು ಇತರೆ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಹುಟ್ಟಿಕೊಂಡು ಬಂದ ಸಂಘಟನೆ ಇದಾಗಿದ್ದು, ಇದರ ನೇತೃತ್ವ ವಹಿಸಿದವರೆಂದರೆ ಮೇಧಾ ಪಾಟ್ಕರ್. ಆದರೆ ಇವತ್ತಿಗೂ ಅಲ್ಲಿಯ ಸಂತ್ರಸ್ತರಾದಂತಹವರಿಗೆ ಸರಿಯಾದ ವ್ಯವಸ್ಥೆಯಾಗಿಲ್ಲ.
- » ಸಂಪೂರ್ಣ ಕ್ರಾಂತಿ – ಚುನಾವಣೆಯಲ್ಲಿ ಪಾರದರ್ಶಕತೆ, ಹೊಣೆಗಾರಿಕೆಗಾಗಿ ಹುಟ್ಟಿಕೊಂಡ ಚಳುವಳಿ, ಇದರ ನೇತೃತ್ವ ಜಯಪ್ರಕಾಶ್ ನಾರಾಯಣ್.
- » ಭ್ರಷ್ಟಾಚಾರ ನಿರ್ಮೂಲನಾ ಸಮಿತಿ/ ಆಂದೋಲನ–ಏಪ್ರಿಲ್–05–2011 ದೇಶದಲ್ಲಿ ಅಧಿಕಾರಶಾಹಿ ಮತ್ತು ಜನಪ್ರತಿನಿಧಿಗಳಲ್ಲಿ ವ್ಯಾಪಕವಾಗಿರುವಂತಹ ಭ್ರಷ್ಟಾಚಾರ ವಿರುದ್ಧ ನಡೆದಂತಹ ಚಳವಳಿ. ಇದರ ನೇತೃತ್ವ ಅಣ್ಣಾ ಹಜಾರೆಯವರು ವಹಿಸಿದ್ದರು, ಈ ಚಳವಳಿಯಲ್ಲಿ ವಿದ್ಯಾರ್ಥಿಗಳು, ನಾಗರಿಕರು, ಸ್ವಯಂ ಸೇವಾ ಸಂಸ್ಥೆಗಳನ್ನೊಳಗೊಂಡು ಎಲ್ಲರೂ ಸಹಿತ ಭಾಗವಹಿಸಿದ್ದರು. ಇದು ದೇಶಾದ್ಯಂತ ಸಂಚಲನವನ್ನುಂಟುಮಾಡಿತು. ಇದರ ಫಲವಾಗಿಯೇ ದೆಹಲಿಯಲ್ಲಿ AAP ಅಧಿಕಾರಕ್ಕೆ ಬಂದದ್ದು ಮತ್ತು ಲೋಕಪಾಲ್ ಮಸೂದೆ ಜಾರಿಗೆ ಬಂದದ್ದು.
- » ಸಾಮಾಜಿಕ ಪರಿವರ್ತನಾ ಸಮಿತಿ – ಸಾಮಾಜಿಕ ಪರಿವರ್ತನಾ ಸಮಿತಿ ದೇಶದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸರ್ಕಾರದ ಆಸ್ತಿ–ಪಾಸ್ತಿ ಮತ್ತು ಸಂಪತ್ತಿನ ನಷ್ಟದಂತಹ ಪ್ರಕರಣಗಳನ್ನು ಮಾಹಿತಿ ಹಕ್ಕಿನಡಿಯಲ್ಲಿ ಹೊರತೆಗೆದು ಅವುಗಳ ವಿರುದ್ಧ ಕಾನೂನು ಸಮರ ಮತ್ತು ಸಾರ್ವಜನಿಕ ಅಭಿಪ್ರಾಯ ರೂಪಿಸಿ ನಷ್ಟವನ್ನು ತಪ್ಪಿಸುವ ಕೆಲಸವನ್ನು ಇವರು ಮಾಡುತ್ತಿದ್ದು, ಇದರ ನೇತೃತ್ವ ಎಸ್.ಆರ್.ಹಿರೇಮಠ್‌ರದು.
- » ಕೋಮು ಸೌಹಾರ್ದ ವೇದಿಕೆ– ದೇಶದಲ್ಲಿ ಧರ್ಮಾಧಾರಿತವಾಗಿ ನಡೆಯುತ್ತಿರುವಂತಹ ಕೋಮು ಭಾವನೆಗಳು ಮತ್ತು ಅದರಿಂದಾಗುವ ತೊಂದರೆಗಳು ಅಥವಾ ಸಂಕಷ್ಟಗಳು ಮರುಕಳಿಸುವುದು, ಅವುಗಳನ್ನು ತಡೆಯುವ ಅಥವಾ ಅಂತಹ ಸಂಘಟನೆಗಳನ್ನು ಚರ್ಚಿಸುವ ಮೂಲಕ ಸಮಾಜದಲ್ಲಿ ಸಾಮರಸ್ಯ ಉಂಟುಮಾಡುವ ಜೊತೆಗೆ ಹಕ್ಕುಗಳ ರಕ್ಷಣೆಗೆ ಪ್ರಯತ್ನಮಾಡುತ್ತಿದೆ.

» ಹಸಿವು ಮುಕ್ತ ಕರ್ನಾಟಕವು ಹಸಿವು ಮುಕ್ತವಾಗಬೇಕೆಂದು ಹೋರಾಟ ಮಾಡಲು ಹುಟ್ಟಿಕೊಂಡಿದೆ ಇದರ ನೇತೃತ್ವ ರವಿಕೃಷ್ಣ ರೆಡ್ಡಿಯವರದು.

» ಜನವಾದಿ ಮಹಿಳಾ ಸಂಘ – ಮಹಿಳಾ ಹಕ್ಕುಗಳು ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ಮಾಡಲು ಹುಟ್ಟಿಕೊಂಡ ಸಂಘಟನೆ ಇದರ ನೇತೃತ್ವ ಕೆ.ಎಸ್. ವಿಮಲ.

» ಚಿಪ್ಕೋ ಚಳುವಳಿ ಪರಿಸರ ಸಂರಕ್ಷಣೆಗೆ. Ecology is permanent economy ಎಂಬ ಘೋಷವಾಕ್ಯದೊಂದಿಗೆ ಹುಟ್ಟಿಕೊಂಡ ಸಂಘಟನೆ– ಇದರ ನೇತೃತ್ವ ಸುಂದರ್ ಲಾಲ್ ಬಹುಗುಣ. ಅಪ್ಪಿಕೋ ಚಳುವಳಿ–1973ರಲ್ಲಿ ಗಾಂಧಿ ತತ್ವದ ಆಧಾರದ ಮೇಲೆ ಮರಗಳನ್ನು ಅಪ್ಪಿಕೊಳ್ಳುವ ಮೂಲಕ ಅರಣ್ಯ ನಾಶದ ವಿರುದ್ಧ ಜನ ಪ್ರತಿಭಟಿಸಿದರು. ಚಂಡಿಪ್ರಸಾದ್ ಭಟ್ ಮತ್ತು ಸುಂದರ್ ಲಾಲ್ ಬಹುಗುಣರವರ ನೇತೃತ್ವದಲ್ಲಿ ನಡೆಯಿತು.

» ಜಂಗಲ್ ಬಚಾವೋ ಆಂದೋಲನ್ –(1980ರ ದಶಕದಲ್ಲಿ ಬಿಹಾರದಲ್ಲಿ ಸ್ವಾಭಾವಿಕವಾಗಿ ಬೆಳೆದ ಟೀಕ್ (ತೇಗ) ಮರಗಳನ್ನು ಸ್ಥಾನಪಲ್ಲಟ ಮಾಡುವ ನಿರ್ಧಾರ ವಿರುದ್ಧ ಅಸಂಖ್ಯಾತ ಜನರು ಪ್ರತಿಭಟಿಸಿದರು).

» ನಿರ್ಭಯಾ ಪ್ರಕರಣ (Nirbhaya Movement)– 2012ರಲ್ಲಿ ದೆಹಲಿಯಲ್ಲಿ ಚಲಿಸುತ್ತಿರುವ ಬಸ್ಸಿನಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದಕ್ಕೆ ದೇಶಾದ್ಯಂತ ಹಲವಾರು ನಾಗರಿಕ ಸಂಘಟನೆಗಳು ಪ್ರತಿಭಟಿಸಿದವು, ಇದು ಎಲ್ಲಾ ಮಾಧ್ಯಮಗಳಲ್ಲಿ ಚರ್ಚೆಯಾಗಿ ಸಾರ್ವಜನಿಕ ಅಭಿಪ್ರಾಯ ರೂಪಗೊಂಡ ನಂತರ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ತಡೆಯಲು ಹಲವಾರು ಭದ್ರತಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಾಯಿತು ಮತ್ತು ಬಾಲಾಪರಾಧಿ ಕಾನೂನಿಗೂ ತಿದ್ದುಪಡಿಯಾಯಿತು ಜೊತೆಗೆ ತಪ್ಪಿತಸ್ಥರಿಗೆ ಶಿಕ್ಷೆಯಾಯಿತು.

» Silent Valley Movement –1973 ರಲ್ಲಿ ಸೈಲೆಂಟ್ ವ್ಯಾಲಿ ಕಾಯ್ದಿರಿಸಿದ ಕೇರಳದ ಪಾಲಕ್ಕಾಡ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಜಲವಿದ್ಯುತ್ ಯೋಜನೆಯನ್ನು ಸ್ಥಾಪಿಸುವುದರ ವಿರುದ್ಧ ಅದನ್ನು ನಿಲ್ಲಿಸಲು ಮಾಡಿದ ಚಳವಳಿಯಾಗಿದೆ. ಏಕೆಂದರೆ ಇದು (ಕೇರಳದ ಪಾಲಕ್ಕಾಡ್ ಜಿಲ್ಲೆಯ ಮೌನ ಕಣಿವೆಯನ್ನು ರಕ್ಷಿಸಲು ನಡೆದಂತಹ ಚಳವಳಿ), ಸದಾ ಹಸಿರಿನಿಂದ ಕಾಣುವ ಉಷ್ಣವಲಯ ಅರಣ್ಯ ಪ್ರದೇಶ ಕಣಿವೆಯನ್ನು ರಕ್ಷಿಸಲು ನಡೆದಂತಹ ಚಳವಳಿ. ಈ ಪ್ರದೇಶವನ್ನು 1984ರಲ್ಲಿ Silent Valley National Park ಎಂದು ಘೋಷಿಸಲಾಯಿತು.

» ಮಣಿಪುರದ ಸರ್ಕಾರದ ಸಶಸ್ತ್ರ ಕಾಯಿದೆಯಿಂದ ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು ಇರೋಮ್ ಶರ್ಮಿಳಾ 14 ವರ್ಷ ಸತ್ಯಾಗ್ರಹವನ್ನು ಮಾಡಿದ್ದನ್ನು ಕಾಣಬಹುದು, ನಂತರ ಪರಿಹಾರ ಕಾಣದೆ ಉಪವಾಸ ನಿಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲನ್ನು ಅನುಭವಿಸಿದರು.

» 2006 ಮೇ ನಲ್ಲಿ ಪಶ್ಚಿಮ ಬಂಗಾಳದ ಸರ್ಕಾರ ಸಿಂಗೂರ್‌ನಲ್ಲಿ ಟಾಟಾ ನ್ಯಾನೊ ಕಾರು ಘಟಕ ಸ್ಥಾಪಿಸಲು ಟಾಟಾ ಕಂಪನಿಗೆ ಅನುಮತಿಸಿ 997 ರೈತರ ಫಲವತ್ತಾದ ಭೂಮಿ ವಶಪಡಿಸಿಕೊಂಡು ಅದಕ್ಕೆ ನೀಡಿತು, ಇದರಿಂದ ಸಂತ್ರಸ್ತರಾದ ರೈತರು ಸರ್ಕಾರದ ನಡೆಯ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದರು ಹೈಕೋರ್ಟ್ 31 ಆಗಸ್ಟ್ 2016 ರಂದು

ಸರ್ಕಾರದ ಪರವಾಗಿ ತೀರ್ಪು ನೀಡಿತು ಇದರ ವಿರುದ್ಧ ರೈತರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು ಸೆಪ್ಟೆಂಬರ್ 06-2016 ರಂದು ರೈತರ ಪರವಾಗಿ ತೀರ್ಪು ನೀಡಿ ಜಮೀನನ್ನು ಹಿಂದಿರುಗಿಸಲು ಆದೇಶ ನೀಡಿತು. ಇದರಿಂದ ಫಲವತ್ತಾದ ಭೂಮಿ ರೈತರಿಗೆ ದಕ್ಕಿ ಅವರ ಭೂಮಿಯ ಹಕ್ಕುಗಳು ರಕ್ಷಣೆಯಾದವು ಇದಕ್ಕೆ ಅಲ್ಲಿಯ ವಿರೋಧ ಪಕ್ಷಗಳು ಬೆಂಬಲಿಸಿದವು.

» ಪೋಸ್ಕೋ ಕಂಪನಿಯು ಕಬ್ಬಿಣ ಮತ್ತು ಉಕ್ಕು ಘಟಕ ಸ್ಥಾಪನೆ- ಜೂನ್ 2010 ಜಾಗತಿಕ ಹೂಡಿಕೆ ಸಮಾವೇಶದಲ್ಲಿ ಉತ್ತರ ಕೊರಿಯಾ ಮೂಲದ ಪೋಸ್ಕೋ ಕಂಪನಿಗೆ ಗದಗಿನಲ್ಲಿ ಕಬ್ಬಿಣ ಮತ್ತು ಉಕ್ಕು ಘಟಕ ಸ್ಥಾಪನೆಗೆ ಕೆ.ಐ.ಎ.ಡಿ.ಬಿ, ಸೂಚಿಸಿತು ಇದರ ವಿರುದ್ಧ ಅಲ್ಲಿಯ ರೈತರು ಮತ್ತು ಮಠಾಧೀಶರು ಪ್ರತಿಭಟಿಸಿದ್ದರಿಂದ ಉದ್ದೇಶಿತ ಕಬ್ಬಿಣ ಮತ್ತು ಉಕ್ಕು ಘಟಕ ಸ್ಥಾಪನೆಯನ್ನು ಕೈ ಬಿಟ್ಟಿದ್ದರಿಂದ ರೈತರ ಹಕ್ಕುಗಳು ರಕ್ಷಣೆಯಾದವು.

» ಬೆಂಗಳೂರಿನಲ್ಲಿ ನಡೆದಂತಹ ಸ್ಟೀಲ್ ಬ್ರಿಡ್ಜ್ ನಿರ್ಮಾಣದ ವಿರುದ್ಧದ ಪ್ರತಿಭಟನೆ- ಬೆಂಗಳೂರಿನಲ್ಲಿ ನಾಗರಿಕರು ಉದ್ದೇಶಿತ ಬ್ರಿಡ್ಜ್ ನಿರ್ಮಾಣದಿಂದ ಅಲ್ಲಿಯ ಮರಗಳನ್ನು ಕಡಿಯುವುದನ್ನು ಮತ್ತು ಇದರಿಂದ ಪರಿಸರದ ಮೇಲಾಗುವ ಹಾನಿಯನ್ನು ತಪ್ಪಿಸಲು ನಡೆಸಿದ ಪ್ರತಿಭಟನೆ.

» ಗದಗಿನ ಕಪ್ಪತ್ತಗುಡ್ಡವನ್ನು ಗಣಿಗಾರಿಕೆಗೆ ನೀಡುವುದನ್ನು ಸ್ವಾಮೀಜಿಗಳು ಸೇರಿದಂತೆ ಆ ಭಾಗದ ರೈತರು ಪ್ರತಿಭಟಿಸಿದ್ದರಿಂದ ಗಣಿಗಾರಿಕೆಯ ಪ್ರಸ್ತಾಪವನ್ನು ಕೈ ಬಿಡಲಾಯಿತು. ಇದರಿಂದ ಅಲ್ಲಿಯ ನೈಸರ್ಗಿಕ ಸಂಪತ್ತಿನ ರಕ್ಷಣೆಯಾಯಿತು.

» Peaceful society October 1985- ಪಶ್ಚಿಮ ಘಟ್ಟ ಉಳಿಸಿ ಹೋರಾಟ ಚಳುವಳಿಯು ಪಶ್ಚಿಮ ಘಟ್ಟದ ಪರಿಸರದ ಮೇಲಾಗುವ ಹಾನಿಯಿಂದ ಜೀವವೈವಿಧ್ಯ ರಕ್ಷಣೆ ದೃಷ್ಟಿ ಮತ್ತು ಸ್ಥಳೀಯ ಜನರ ಹಕ್ಕುಗಳ ದೃಷ್ಟಿಯಿಂದ ಈ ಹೋರಾಟ ಒಂದು ಹೆಗ್ಗುರುತು.

» ಗುಂಡ್ಯ ಪವರ್ ಪ್ರಾಜೆಕ್ಟ್ ವಿರುದ್ಧದ ಚಳವಳಿ-ಕೆ.ಪಿ.ಸಿ.ಎಲ್. ಸಂಸ್ಥೆ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗದ ಗುಂಡ್ಯಾದಲ್ಲಿ 200 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ನೇತ್ರಾವತಿನದಿಗೆ ಅಡ್ಡಲಾಗಿ ಸ್ಥಾಪಿಸಲು ಪ್ರಸ್ತಾಪಿಸಿತು. ಇದನ್ನು ಬೆಂಗಳೂರು ಮೂಲದ ಕಂಪನಿಯೊಂದಕ್ಕೆ ಕೊಡಲು ಉದ್ದೇಶಿಸಿದ್ದನ್ನು ಕುದುರೆಮುಖ ವನ್ಯಜೀವಿ ಸಂಸ್ಥೆ, ಮಂಗಳೂರು ಭಾಗದ ಪರಿಸರವಾದಿಗಳು ಆ ಭಾಗದಲ್ಲಿ ಸಮಗ್ರವಾಗಿ ಪರಿಸರದ ಮೇಲಾಗುವ ಹಾನಿಯ ಕಾರಣಕ್ಕೆ ವಿರೋಧಿಸಿತು ಮತ್ತು ಯೋಜನೆಯನ್ನು ಕೈಬಿಡಲು ಬೇಡಿಕೆ ಸಲ್ಲಿಸಿತು (ಇಲ್ಲಿಗೆ ಪಕ್ಷಿಧಾಮ 9.5 ಕಿ.ಮೀ ಹತ್ತಿರವಿದೆ. ಜೀವವೈವಿಧ್ಯ ದೃಷ್ಟಿಯಿಂದಲೂ ಸೂಕ್ಷ್ಮ ಪ್ರದೇಶವಾಗಿದ್ದು ಇದರಿಂದ ಈ ನದಿ ಭಾಗದಲ್ಲಿರುವ ಶುದ್ಧನೀರಿನ ಮೀನುಗಾರಿಕಾ ಪ್ರದೇಶಗಳಿಗೆ ತೊಂದರೆಯಾಗುವುದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿ ಹಾಗೂ ಕುಡಿಯುವ ನೀರಿನ ಮೂಲವಾಗಿರುವ ನೇತ್ರಾವತಿ ಬತ್ತಿಹೋಗುವ ಅಪಾಯವಿದೆ ಎನ್ನುವ ಕಾರಣಕ್ಕೆ.)

» ಮಂಗಳೂರಿನಲ್ಲಿ ಇತ್ತೀಚೆಗೆ ಕೋಮು ಸೌಹಾರ್ದ ವೇದಿಕೆಯು ಅಲ್ಲಿಯ ಕೋಮು ಗಲಭೆಗಳ ವಿರುದ್ಧ ಜನರಲ್ಲಿ ಸೌಹಾರ್ದತೆ ತರಲು ಪ್ರಯತ್ನಿಸಿತು ಈ ಬಗ್ಗೆ ಜನರಿಗೆ ಜಾಗೃತಿಯನ್ನು ಉಂಟುಮಾಡಿತು.

» ಮಾದಿಗ ದಂಡೋರ ಸಮಿತಿ- ಕರ್ನಾಟಕದಲ್ಲಿ ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿ ಅವಕಾಶ

ವಂಚಿತ ಮತ್ತು ಅಸ್ಪೃಶ್ಯ ಸಮಾಜವಾದ ಮಾದಿಗರಿಗೆ ಒಳಮೀಸಲಾತಿ ಮತ್ತು ಮತ್ತಿತರ ಸೌಲಭ್ಯಗಳಿಗೆ ಹೋರಾಟ ಮಾಡುವ ಸಮಿತಿಯಾಗಿದೆ.

» ಮಾನವ ಬಂಧುತ್ವ ವೇದಿಕೆ – ಜನರಲ್ಲಿ ಸಾಮರಸ್ಯ ಮೂಡಿಸುವ ಕೆಲಸ.

» ಕಾವೇರಿ ನೀರಾವರಿ ಹೋರಾಟ ಸಮಿತಿ–ಕಾವೇರಿ ನದಿನೀರನ್ನು ಆಶ್ರಯಿಸಿ ಕೃಷಿ ಮಾಡುವ ರೈತರನ್ನು ಒಳಗೊಂಡ ಸಮಿತಿ ಇದಾಗಿದ್ದು ಕಾವೇರಿಯ ನೀರಿನ ಅವೈಜ್ಞಾನಿಕ ನಿರ್ವಹಣೆ ಮತ್ತು ಕಾವೇರಿಯ ನೀರನ್ನು ಹಂಚಿಕೊಳ್ಳುವ ತಮಿಳು ನಾಡು ಮತ್ತು ಇತರೆ ರಾಜ್ಯಗಳಿಂದ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ರಚನೆಯಾದದ್ದು.

» ಕರ್ನಾಟಕ ರೈತ ಸಂಘ–ರೈತರಿಗೆ ತಾವು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ, ಸರ್ಕಾರದ ವಿವೇಚನಾರಹಿತ ನೀತಿ ಹಾಗೂ ಪ್ರಕೃತಿ ವಿಕೋಪ ಅತಿವೃಷ್ಟಿ ಅನವೃಷ್ಟಿಗಳ ಸಂದರ್ಭಗಳಲ್ಲಿ ರೈತರಿಗಾಗುವ ನಷ್ಟಗಳ ಪರಿಹಾರಕ್ಕೆ ಹೋರಾಟ ನಡೆಸುತ್ತದೆ ಮತ್ತು ರಾಷ್ಟ್ರಮಟ್ಟದಲ್ಲಿ ಸುಮಾರು ವರ್ಷಗಟ್ಟಲೆ ಹೋರಾಟ ಮಾಡಿ ಕೇಂದ್ರ ಸರ್ಕಾರ ಜಾರಿಗೆ ತಂದ ಎರಡು ಕೃಷಿ ಕಾಯಿದೆಗಳನ್ನು ವಾಪಾಸು ಪಡೆಯುವಂತೆ ಮಾಡಿದ ಸಾಧನೆಯಾಗಿದೆ.

» ಜನ ಸಂಗ್ರಾಮ ಪರಿಷತ್ – ಜನರ ಹಕ್ಕುಗಳ ರಕ್ಷಣೆ ಮತ್ತು ಸರ್ಕಾರದ ಅನೀತಿಗಳನ್ನು ವಿರೋಧಿಸಲು ಹಾಗೂ ಪರಿಸರ ರಕ್ಷಣೆಯಂತಹ ಕಾರ್ಯವನ್ನು ಮಾಡುವ ಉದ್ದೇಶ ಹೊಂದಿದೆ.

» ಇದರ ನೇತೃತ್ವ ಎಸ್.ಆರ್.ಹಿರೇಮಠ್.

» PUCL– ನಾಗರಿಕ ಹಕ್ಕುಗಳ ರಕ್ಷಣೆಗೆ ಹುಟ್ಟಿಕೊಂಡ ಸಂಘಟನೆ.

**ಉಪಸಂಹಾರ:**

ಹೀಗೆ ನಾಗರಿಕ ಸಮಾಜವು ಕೆಲವು ಸಾಮೂಹಿಕವಾದ ಉದ್ದೇಶಗಳನ್ನು ಹೊಂದಿ ಮೂರನೆ ಶಕ್ತಿಯಾಗಿ ಸದಾ ಸರ್ಕಾರವು ಸಂವಿಧಾನಾತ್ಮಕ ಚೌಕಟ್ಟಿನಲ್ಲಿಯೇ ಸಂವಿಧಾನಾತ್ಮಕ ಸರ್ಕಾರವಾಗಿ, ಮಿತ ಸರ್ಕಾರವಾಗಿ, ಜವಾಬ್ದಾರಿಯುತವಾಗಿ, ಉತ್ತರದಾಯಿತ್ವದಿಂದ, ಪಾರದರ್ಶಕವಾಗಿ ನೈತಿಕ ಚೌಕಟ್ಟಿನಲ್ಲಿ ಕೆಲಸಮಾಡುವ ಮೂಲಕ ಜನರ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವ ಮೂಲಕ ಸ್ಪಂದನಾಶೀಲ ಸರ್ಕಾರವಾಗಿ ವಿಶ್ವಾಸಾರ್ಹವಾಗಿ ಎಲ್ಲರಿಗೂ ಸಾಮಾಜಿಕ ನ್ಯಾಯದ ಆದ್ಯತೆ ನೀಡಿ, ಜನರ ಸಮ್ಮತಿಯನ್ನು ಹಾಗೂ ಬೆಂಬಲವನ್ನು ಪಡೆಯುವಂತಾಗಿ, ಜನರ ಹಕ್ಕುಗಳ ರಕ್ಷಣೆಯಾಗಿ, ಜನರು ಘನತೆಯ ಬದುಕು ಸಾಗಿಸಲು ನಾಗರಿಕ ಸಮಾಜ ಸದಾ ಮೂರನೆ ಶಕ್ತಿಯಾಗಿದೆ. ಅಲ್ಲದೆ ನಾಗರಿಕ ಸಮಾಜ, ಯಾವಾಗಲೂ ಸರ್ಕಾರದೊಂದಿಗೆ ಉದ್ವೇಗಕ್ಕೆ ಇಳಿಯುವುದಿಲ್ಲ. ಯಾವಾಗಲೂ ಟೀಕಿಸುವುದೂ ಇಲ್ಲ. ವಾಸ್ತವವಾಗಿ ಎಲ್ಲಾ ಹಂತಗಳಲ್ಲಿ ಉತ್ತರದಾಯಿತ್ವ, ಜವಾಬ್ದಾರಿಯುತ, ಒಳಗೊಳ್ಳುವಿಕೆಯ, ಪರಿಣಾಮಕಾರಿ ಮತ್ತು ಹೆಚ್ಚು ಶಾಸನಾತ್ಮಕವಾಗಿರುತ್ತದೆ. ಇದು ನಾಗರಿಕರು ಪ್ರಭುತ್ವವನ್ನು ಗೌರವಿಸಲು, ಸಂಬಂಧ ಹೊಂದಲು ಅಣಿಗೊಳಿಸುತ್ತದೆಯಲ್ಲದೆ ಸರ್ಕಾರದ ಪರಿಶೀಲನಾ ಕಾರ್ಯ ನಿರ್ವಹಿಸುವುದರ ಜೊತೆಗೆ ಪ್ರಜಾಸತ್ತಾತ್ಮಕ ರಾಜ್ಯವು ಅದು ಪರಿಣಾಮಕಾರಿ ಮತ್ತು ನ್ಯಾಯ ಸಮ್ಮತವಾಗಿ ಜನರಿಂದ ಗೌರವ ಮತ್ತು ಬೆಂಬಲವನ್ನು ಪಡೆಯುವಂತೆ ಮಾಡಿ ಪ್ರಜಾಪ್ರಭುತ್ವ ಸರ್ಕಾರ ಉತ್ತಮ ಸರ್ಕಾರವಾಗಿ ಕಾರ್ಯನಿರ್ವಹಿಸಲು ನಾಗರಿಕ ಸಮಾಜ ಪಾತ್ರವಹಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಮೀನಾದೇಶಪಾಂಡೆ, ಬಿ.ಕೆ.ದತ್ತಾತ್ರಿ, ''ರಾಜಕೀಯ ಸಿದ್ಧಾಂತ ಸಮಕಾಲೀನ ಚಿಂತನೆ'', ಶ್ರೀ ರಂಗ ಪ್ರಿಂಟರ್ಸ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
2. ಮುಜಾಫರ್ ಅಸ್ಸಾದಿ, ''ಜಾಗತೀಕರಣ ಮತ್ತು ನಾಗರಿಕ ಸಮಾಜ: ಭಾರತದ ಸಂದರ್ಭದಲ್ಲಿ ಸವಾಲುಗಳ ನಿರ್ವಹಣೆ'' ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ, ಸಂಪುಟ–1, ಸಂಚಿಕೆ –2, ಜೂನ್ 2002 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
3. ಚಂದ್ರಪೂಜಾರಿ, ''ಸೋಶಿಯಲ್ ಕ್ಯಾಪಿಟಲ್''– ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕ್, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ, ಸಂಪುಟ–1, ಸಂಚಿಕೆ–2, ಜೂನ್ 2002, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
4. ನಾಗರಿಕ ಸಮಾಜದ ಅರ್ಥ, ವ್ಯಾಖ್ಯೆ ಮತ್ತು ವ್ಯಾಪ್ತಿ, ಸ್ಪರ್ಧಾಚೈತ್ರ, ಫೆಬ್ರವರಿ 2012.
5. ಲಕ್ಷ್ಮಣ ಕೊಡಸೆ, ''ಇ ಆಡಳಿತ: ವಿಳಂಬ ತಡೆಗೆ ಯಶಸ್ವಿಸೂತ್ರ'', ಯೋಜನಾ, ಜನವರಿ 2013.
6. ಜೈನ್. ಆರ್.ಬಿ, ''ಉತ್ತಮ ಆಡಳಿತ ಪ್ರಯತ್ನ'' ಯೋಜನಾ, ಮಾರ್ಚ್ 2014.